ಮೂಲಕ ಉತ್ತರಿಸುವ 55 ಪ್ರಶ್ನೆಗಳ ಪೈಕಿ 47 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ದಿನಾಂಕ 30–06–2010ರ 3ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 39 ಪ್ರಶ್ನೆಗಳ ಪೈಕಿ 36 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಅಧ್ಯಕ್ಷರು:** ಮಂಡಿಸಲಾಯಿತು. ಅನುಬಂಧ (ಅ)

**3. ಸಭೆಯ ಮುಂದಿಡಲಾದ ಕಾಗದ ಪತ್ರಗಳು:**

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)(ಮುಖ್ಯಮಂತ್ರಿಯವರ ಪರವಾಗಿ):**

i) ಭಾರತ ಸಂವಿಧಾನ 151(2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2009ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರ ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ (ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು) ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ii) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2009ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ ಮಾಹಿತಿ ವ್ಯವಸ್ಥೆಗಳ ಲೆಕ್ಕಪರಿಶೋಧನೆ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):**

**I ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ:–**

**(iii) 1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಪ್ರಕರಣ 39ರ ಮೇರೆಗೆ:**

1. ದಿನಾಂಕ 05.07.2002ರಂದು ಹೊರಡಿಸಲಾಗಿದ್ದ ಅಧಿಸೂಚನೆ ಸಂಖ್ಯೆ ಎಫ್‌ಡಿ 31 ಸಿಎಸ್‌ಎಲ್ 2002 ರಲ್ಲಿ ವಿವರಿಸಿದಂತೆ ಕರ್ನಾಟಕ ಸರ್ಕಾರವು **"ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್"** ಅನ್ನು ಒಂದು **ತೈಲ ಕಂಪನಿ** ಎಂದು ನಿರ್ದಿಷ್ಟ ಉದ್ದೇಶಕ್ಕಾಗಿ ಪರಿಗಣಿಸಲು ದಿನಾಂಕ 24.03.2010ರಂದು ಹೊರಡಿಸಲಾಗಿರುವ ಎಫ್‌ಡಿ 50 ಸಿಎಸ್‌ಎಲ್ 2010ರ ಅಧಿಸೂಚನೆ.

2. ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು 2010-11ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10(1) ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

**2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ ಕಲಂ 89ರ ಮೇರೆಗೆ:**

1. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ದಿನಾಂಕ 01.04.2010ರಿಂದ 30.06.2010ರವರೆಗೆ ಔಷಧ ಮತ್ತು ಔಷದ ವಸ್ತುಗಳ ಮಾರಾಟದ ಮೇಲೆ ಶೇ.4ರಷ್ಟು ತೆರಿಗೆಯನ್ನು ಕಡಿತಗೊಳಿಸುವ ಬಗ್ಗೆ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 94 ಸಿಎಸ್‌ಎಲ್ 10ನೇ ಸಂಖ್ಯೆಯ ಅಧಿಸೂಚನೆ.

2. 2003ರ ಕರ್ನಾಟಕ ಮೌಲ್ಯ ವರ್ಧಿಕ ತೆರಿಗೆ ಕಾಯ್ದೆಯಡಿ ಭತ್ತ, ಅಕ್ಕಿ, ಗೋಧಿ, ದ್ವಿದಳ ದಾನ್ಯ, ಅಕ್ಕಿ ಮತ್ತು ಗೋದಿಯ ಹಿಟ್ಟು ಹಾಗೂ ರವೆ ಮತ್ತು ಮೈದಾ ಹಿಟ್ಟು ಇವುಗಳ ಮಾರಾಟದ ಮೇಲಿನ ತೆರಿಗೆಗೆ ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ 31.03.2011ರವರೆಗೆ ತೆರಿಗೆ ವಿನಾಯಿತಿ ನೀಡಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10(2)ನೇ ಸಂಖ್ಯೆಯ ಅಧಿಸೂಚನೆ.

3. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಈ ಕೆಳಕಂಡ ಅಧಿಸೂಚನೆಗಳನ್ನು ರದ್ದುಗೊಳಿಸಿ, ಆಯ್ದ 25 ಸಾಮಗ್ರಿಗಳಿಗೆ ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ಶೇ.5ರಷ್ಟು ತೆರಿಗೆ ವಿನಾಯಿತಿ ನೀಡಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10(3) ನೇ ಸಂಖ್ಯೆಯ ಅಧಿಸೂಚನೆ.

1. ಎಫ್‌ಡಿ 169 ಸಿಎಸ್‌ಎಲ್ 2005, ದಿನಾಂಕ 05.07.2005
2. ಎಫ್‌ಡಿ 116 ಸಿಎಸ್‌ಎಲ್ 2006(6), ದಿನಾಂಕ 31.03.2006
3. ಎಫ್‌ಡಿ 121 ಸಿಎಸ್‌ಎಲ್ 2006, ದಿನಾಂಕ 10.05.2006

4. ಎಫ್‌ಡಿ 221 ಸಿಎಸ್‌ಎಲ್ 2006, ದಿನಾಂಕ 29.11.2006
5. ಎಫ್‌ಡಿ 166 ಸಿಎಸ್‌ಎಲ್ 2006, ದಿನಾಂಕ 11.12.2006
6. ಎಫ್‌ಡಿ 140 ಸಿಎಸ್‌ಎಲ್ 2006, ದಿನಾಂಕ 19.12.2006
7. ಎಫ್‌ಡಿ 115 ಸಿಎಸ್‌ಎಲ್ 2007(3), ದಿನಾಂಕ 30.03.2007
8. ಎಫ್‌ಡಿ 115 ಸಿಎಸ್‌ಎಲ್ 2007(3), ದಿನಾಂಕ 30.03.2007
9. ಎಫ್‌ಡಿ 115 ಸಿಎಸ್‌ಎಲ್ 2007(4), ದಿನಾಂಕ 30.03.2007
10. V ಎಫ್‌ಡಿ 192 ಸಿಎಸ್‌ಎಲ್ 2007, ದಿನಾಂಕ 23.06.2007
11. VII ಎಫ್‌ಡಿ 507 ಸಿಎಸ್‌ಎಲ್ 2007, ದಿನಾಂಕ 24.03.2008
12. IV ಎಫ್‌ಡಿ 507 ಸಿಎಸ್‌ಎಲ್ 2008, ದಿನಾಂಕ 31.07.2008
13. X ಎಫ್‌ಡಿ 63 ಸಿಎಸ್‌ಎಲ್ 2009, ದಿನಾಂಕ 30.03.2009

4. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ 116 ಸಿಎಸ್‌ಎಲ್ 2006(11) ದಿನಾಂಕ 31.03.2006ನ್ನು ರದ್ದುಗೊಳಿಸಿ, 01.04.2010ರಿಂದ ಜಾರಿಗೆ ಬರುವಂತೆ ವಾರ್ಷಿಕ ವಹಿವಾಟನ್ನು ರೂ.25ಲಕ್ಷಗಳಿಗೆ ಹೆಚ್ಚಿಸಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10 (4)ನೇ ಸಂಖ್ಯೆ ಅಧಿಸೂಚನೆ.

5. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ 116 ಸಿಎಸ್‌ಎಲ್ 2006(14) ದಿನಾಂಕ 31.03.2006 ಮತ್ತು ಅಧಿಸೂಚನೆ VI 63 ಸಿಎಸ್‌ಎಲ್ 2009ನ್ನು ರದ್ದುಗೊಳಿಸಿ ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ಸೇನೆ ಕ್ಯಾಂಟೀನುಗಳ ಕೆಲವು ವಸ್ತುಗಳ ಮಾರಾಟಗಳ ಮೇಲೆ ಶೇ.5ರಷ್ಟು ತೆರಿಗೆಯನ್ನು ಕಡಿತಗೊಳಿಸಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10 (5) ನೇ ಸಂಖ್ಯೆಯ ಅಧಿಸೂಚನೆ.

6. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಅಧಿಸೂಚನೆ V ಎಫ್‌ಡಿ 182 ಸಿಎಸ್‌ಎಲ್ 2008 ದಿನಾಂಕ 31.07.2008ನ್ನು ರದ್ದುಗೊಳಿಸಿ, ಕಲಂ 4(1)ರ ಷರತ್ತುಗಳಿಗೆ ಒಳಪಟ್ಟು ಬಳಸಲಾದ ವಾಹನಗಳ

ಖರೀದಿ ಮತ್ತು ಮಾರಾಟ.ದ ಮೇಲೆ ವ್ಯಾಪಾರಿ ಪಾವತಿಸಬೇಕಾದ ತೆರಿಗೆಯನ್ನು ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ಕಡಿತಗೊಳಿಸಿ ದಿನಾಂಕ 31.03.2010ರಂದು ಹೋರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10(6) ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

**1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:**

1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಕಾಯ್ದೆಯಡಿ ನಶ್ಯೆಯನ್ನು ಹೊರತುಪಡಿಸಿ ಎಲ್ಲಾ ತಂಬಾಕು ಉತ್ಪನ್ನಗಳ ಪ್ರವೇಶದ ಮೇಲೆ ವ್ಯಾಪಾರಿಯು ಪಾವತಿಸಬೇಕಾದ ತೆರಿಗೆಯನ್ನು ದಿನಾಂದ 01.04.2010ರಿಂದ ಜಾರಿಗೆ ಬರುವಂತೆ ಶೇ.2ಕ್ಕೆ ಇಳಿಸಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 86 ಸಿಎಸ್‌ಎಲ್ 2010ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತಿದ್ದೇನೆ.

**1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ ಕಲಂ 8(3)ರ ಮೇರೆಗೆ:**

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ ನಿಯಮಾಗಳಿಗೆ 65–ಎ ಹೊಸ ನಿಯಮ ಸೇರ್ಪಡೆಗೆ ಸಂಬಂಧಿಸಿದಂತೆ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 21.04.2010ರಂದು ಹೊರಡಿಸಲಾದ ಎಫ್‌ಡಿ 6 ಎಸ್‌ಆರ್‌ಎ 2008ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತಿದ್ದೇನೆ.

**1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 23(3)ರ ಮೇರೆಗೆ:**

1985ರ ಕರ್ನಾಟಕ ಲೋಕಾಯುಕ್ತ ನಿಯಮಾವಳಿ ನಿಯಮ 6ಎಗೆ ತಿದ್ದುಪಡಿ ಮಾಡಿ ದಿನಾಂಕ 15.06.2009 ಹಾಗೂ 18.06.2009ರಂದು ಹೊರಡಿಸಲಾದ ಸಿಆಸುಇ 2 ಸೇಲೋಯು 2010ನೇ ಸಂಖ್ಯೆಯ ಅಧಿಸೂಚನೆ ಮತ್ತು ತಿದ್ದುಪಡಿ ಆದೇಶವನ್ನು ಮಂಡಿಸುತ್ತಿದ್ದೇನೆ.

**2005ರ ಮಾಹಿತಿ ಹಕ್ಕು ಅಧಿನಿಯಮದ ಕಲಂ 29(2)ರ ಮೇರೆಗೆ:**

1. ದಿನಾಂಕ 27.11.2009ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ ಡಿ.ಪಿ.ಎ.ಆರ್ 131 ಇಜಿಎಮ್ 2009ನ್ನು ರದ್ದುಪಡಿಸಿ, ಕೆಲವು ಅಧಿಕಾರಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಇ–ಆಡಳಿತ ವಿಭಾಗಕ್ಕೆ

ಸಂಬಂಧಿಸಿದಂತೆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳೆಂದು ಪದನಾಮಿಕರಿಸಿ ದಿನಾಂಕ 20.01.2010ರಂದು ಹೊರಡಿಸಲಾದ ಸಿಆಸುಇ 131 ಇಆಇ 2009ನೇ ಸಂಖ್ಯೆಯ ಅಧಿಸೂಚನೆ.

2. ಅಧಿಸೂಚನೆ ಸಂಖ್ಯೆ ಡಿ.ಪಿ.ಎ.ಆರ್ 79 ಇಜಿಎಮ್ 2005ನ್ನು ರದ್ದುಪಡಿಸಿ, ಪೀಠಾಧಿಕಾರಿ–2, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಇ–ಆಡಳಿತ ಇವರನ್ನು ಸಿಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಇ–ಆಡಳಿತ) ವಿಭಾಗಕ್ಕೆ ಸಂಬಂಧಿಸಿದಂತೆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಗಳೆಂದು ಪದನಾಮಕರಿಸಿ ದಿನಾಂಕ 27.11.2009ರಂದು ಹೊರಡಿಸಲಾದ ಸಿಆಸುಇ 131 ಇಆಇ 2009ನೇ ಸಂಖ್ಯೆಯ ಅಧಿಸೂಚನೆ.

3. ಅಧಿಸೂಚನೆ ಸಂಖ್ಯೆ ಡಿ.ಪಿ.ಎ.ಆರ್ 79 ಇಜಿಎಮ್ 2005ನ್ನು ರದ್ದುಪಡಿಸಿ, ಸರ್ಕಾರದ ಉಪ/ ಜಂಟಿ/ ಅಪರ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಇ–ಆಡಳಿತ) ಇವರನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಇ–ಆಡಳಿತ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಅಪೀಲು ಪ್ರಾಧಿಕಾರವನ್ನಾಗಿ ನೇಮಿಸಿ 27.11.2009ರಂದು ಹೊರಡಿಸಲಾದ ಸಿಆಸುಇ 131 ಇಆಇ 2009ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

**1999ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಕಲಂ 25(2)ರನ್ವಯ:**

1. 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ, ಬೆಂಗಳೂರು ಇದರ ಎಲ್ಲಾ ಸಂಗ್ರಹಣೆಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸತಕ್ಕದ್ದು ಎಂದು ಗೊತ್ತುಪಡಿಸಿ ದಿನಾಂಕ 28.04.2010ರಂದು ಹೊರಡಿಸಲಾದ ಸಿಆಸುಇ 2 ಇಸಂಗ್ರ 2010ನೇ ಸಂಖ್ಯೆಯ ಅಧಿಸೂಚನೆ.

2. 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದಿನಾಂಕ 22.08.2008ರ ಅಧಿಸೂಚನೆ ಸಂಖ್ಯೆ ಸಿಆಸುಇ 26

ಇಜಿವಿ 2003(ಪಿ–1)ನ್ನು ರದ್ದುಪಡಿಸುತ್ತಾ, ಇಂಧನ ಇಲಾಖೆಯ ಆಡಳಿತಾತ್ಮಕ ನಿಯಂತ್ರಣಕ್ಕೆ ಸೇರಿದ ಕೆಲವು ವಿದ್ಯುತ್ ಸರಬರಾಜು ಕಂಪನಿಗಳಿಗೆ ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ರೂ.5ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟ ಎಲ್ಲಾ ಸಂಗ್ರಹಣೆಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವಂತೆ ಗೊತ್ತುಪಡಿಸಿ ದಿನಾಂದ 22.03.2010ರಂದು ಹೊರಡಿಸಲಾದ ಸಿಆಸುಇ 3 ಇಸಂಗ್ರ 2009ನೇ ಸಂಖ್ಯೆಯ ಅಧಿಸೂಚನೆ,

3. 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದಿನಾಂಕ 04.03.2008ರ ಅಧಿಸೂಚನೆ ಸಂಖ್ಯೆ ಸಿಆಸುಇ 26 ಇಜಿವಿ 2003(ಪಿ–1) ಹಾಗೂ ದಿನಾಂಕ 22.02.2010ರ ಅಧಿಸೂಚನೆ ಸಂಖ್ಯೆ ಸಿಆಸುಇ 03 ಇಪಿಆರ್ 2009(2) ಇವುಗಳನ್ನು ರದ್ದುಪಡಿಸುತ್ತಾ, ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ(ದಕ್ಷಿಣ) ಲೋಕೋಪಯೋಗಿ ಇಲಾಖೆ ಇವರಿಗೆ ಸಂಬಂಧಿಸಿದಂತೆ ದಿನಾಂಕ 26.12.2007ರ ಅಧಿಸೂಚನೆ ಸಂಖ್ಯೆ ಸಿಆಸುಇ 26 ಇಜಿವಿ 2003(ಪಿ–1)ನ್ನು ಭಾಗಶ್ ಮಾರ್ಪಡಿಸಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜನಸಾರಿಗೆ ಸಚಿವಾಲಯದ ಆಡಳಿತಾತ್ಮಕ ನಿಯಂತ್ರಣಕ್ಕೆ ಸೇರಿದ ಎಲ್ಲಾ ಇಲಾಖೆಗಳು ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ರೂ.20.00ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟ ಎಲ್ಲಾ ಸಂಗ್ರಹಣೆಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವಂತೆ ಗೊತ್ತುಪಡಿಸಿ ದಿನಾಂಕ 20.03.2010ರಂದು ಹೊರಡಿಸಲಾದ ಸಿಆಸುಇ 3 ಇಸಂಗ್ರ 2009ನೇ ಸಂಖ್ಯೆಯ ಅಧಿಸೂಚನೆ.

4. 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದಿನಾಂಕ 22.02.2010ರಿಂದ ಜಾರಿಗೆ ಬರುವಂತೆ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ(ಉತ್ತರ), ಧಾರವಾಡ ಇದರ ರೂ.10ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟ ಎಲ್ಲಾ ಸಂಗ್ರಹಣೆಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವಂತೆ ಗೊತ್ತುಪಡಿಸಿ ದಿನಾಂಕ 22.02.2010ರಂದು ಹೊರಡಿಸಲಾದ ಸಿಆಸುಇ 3 ಇಸಂಗ್ರ 2009(1)ನೇ ಸಂಖ್ಯೆಯ ಅಧಿಸೂಚನೆ.

5. 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದಿನಾಂಕ 01.03.2010ರಿಂದ ಜಾರಿಗೆ ಬರುವಂತೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇದರ ಎಲ್ಲಾ ಸಂಗ್ರಹಣೆಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವಂತೆ ಗೊತ್ತುಪಡಿಸಿ ದಿನಾಂಕ 15.02.2010ರಂದು ಹೊರಡಿಸಲಾದ ಸಿಆಸುಇ 3 ಇಸಂಗ್ರ 2009(1)ನೇ ಸಂಖ್ಯೆಯ ಅಧಿಸೂಚನೆ.

6. 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದಿನಾಂಕ 15.02.2010ರಿಂದ ಜಾರಿಗೆ ಬರುವಂತೆ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇದರ ಎಲ್ಲಾ ಸಂಗ್ರಹಣೆಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವಂತೆ ಗೊತ್ತುಪಡಿಸಿ ದಿನಾಂಕ 04.02.2010ರಂದು ಹೊರಡಿಸಲಾದ ಸಿಆಸುಇ 3 ಇಸಂಗ್ರ 2009(1)ನೇ ಸಂಖ್ಯೆಯ ಅಧಿಸೂಚನೆ.

7. 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದಿನಾಂಕ 15.02.2010ರಿಂದ ಜಾರಿಗೆ ಬರುವಂತೆ ವಾರ್ತಾ ಇಲಾಖೆ, ಬೆಂಗಳೂರು ಇದರ ಎಲ್ಲಾ ಸಂಗ್ರಹಣೆಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವಂತೆ ಗೊತ್ತುಪಡಿಸಿ ದಿನಾಂಕ 04.02.2010ರಂದು ಹೊರಡಿಸಲಾದ ಸಿಆಸುಇ 3 ಇಸಂಗ್ರ 2009(3)ನೇ ಸಂಖ್ಯೆಯ ಅಧಿಸೂಚನೆ.

8. 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದಿನಾಂಕ 02.02.2010ರಿಂದ ಜಾರಿಗೆ ಬರುವಂತೆ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇದರ ಎಲ್ಲಾ ಸಂಗ್ರಹಣೆಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವಂತೆ ಗೊತ್ತುಪಡಿಸಿ ದಿನಾಂಕ 02.02.2010ರಂದು ಹೊರಡಿಸಲಾದ ಸಿಆಸುಇ 3 ಇಸಂಗ್ರ 2009(1)ನೇ ಸಂಖ್ಯೆಯ ಅಧಿಸೂಚನೆ.

9. 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದಿನಾಂಕ 01.01.2010ರಿಂದ ಜಾರಿಗೆ ಬರುವಂತೆ ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇದರ ಇಲ್ಲಾ ಸಂಗ್ರಹಣೆಗಳನ್ನು

ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವಂತೆ ಗೊತ್ತುಪಡಿಸಿ ದಿನಾಂಕ 26.12.2009 ರಂದು ಹೊರಡಿಸಲಾದ ಸಿಆಸುಇ 3 ಇಸಂಗ್ರ 2009(1)ನೇ ಸಂಖ್ಯೆಯ ಅಧಿಸೂಚನೆ.

10. 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದಿನಾಂಕ 01.01.2010ರಿಂದ ಜಾರಿಗೆ ಬರುವಂತೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಇದರ ಎಲ್ಲಾ ಸಂಗ್ರಹಣೆಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವಂತೆ ಗೊತ್ತುಪಡಿಸಿ ದಿನಾಂಕ 26.12.2009ರಂದು ಹೊರಡಿಸಲಾದ ಸಿಆಸುಇ 3 ಇಸಂಗ್ರ 2009(2)ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

**II ಶ್ರೀ ಜಿ.ಕರುಣಾಕರರೆಡ್ಡಿ (ಕಂದಾಯ) ಸಚಿವರು,**
**ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಪ್ರಕರಣ 198ರನ್ವಯ:**

1. ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂಮಂಜೂರಾತಿ ನಿಯಮಗಳು, 1969ಕ್ಕೆ ದಿನಾಂಕ 01.01.2000ದಿಂದ ಜಾರಿಗೆ ಬರುವಂತೆ ಹೊಸ ನಿಯಮಗಳನ್ನು ರಚಿಸಿ ದಿನಾಂಕ 25.03.2000ರಂದು ಹೊರಡಿಸಲಾದ ಆರ್‌ಡಿ 57 ಎಲ್‌ಜಿಪಿ 98(ಪಿII) ನೇ ಸಂಖ್ಯೆಯ ಅಧಿಸೂಚನೆ.

2. 1966 ಕರ್ನಾಟಕ ಭೂ ಕಂದಾಯ ಅಧಿನಿಯಮದ ನಿಯಮ 119ನ್ನು ತಿದ್ದುಪಡಿ ಮಾಡಿ, ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 7.9.2000ರಂದು ಹೊರಡಿಸಲಾದ ಆರ್‌ಡಿ 50 ಎಲ್‌ಜೆಪಿ 96ನೇ ಸಂಖ್ಯೆಯ ಅಧಿಸೂಚನೆ.

3. ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂಮಂಜೂರಾತಿ ನಿಯಮಗಳು, 1999ರ ನಿಯಮ 3 ಉಪ ನಿಯಮ 1ನ್ನು ಪ್ರತಿಯೋಜಿಸಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 31.01.2000ರಂದು ಹೊರಡಿಸಲಾದ ಆರ್‌ಡಿ 57 ಎಲ್‌ಜಿಪಿ 98(ಪಿI) ನೇ ಸಂಖ್ಯೆಯ ಅಧಿಸೂಚನೆ

4. 1966ರ ಕರ್ನಾಟಕ ಭೂ ಕಂದಾಯ ನಿಯಮಗಳ ನಿಯಮ 108–ಐ ರಲ್ಲಿ ಡೆಟ್ ರಿಸರ್ವ್ ಎಂಬ ಪದವನ್ನು ಕೈಬಿಟ್ಟು ತಿದ್ದುಪಡಿ ಮಾಡಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 21.02.2003ರಂದು ಹೊರಡಿಸಲಾದ ಆರ್‌ಡಿ 59 ಎಲ್‌ಜಿಪಿ 2000 ನೇ ಸಂಖ್ಯೆಯ ಅಧಿಸೂಚನೆ.

5. ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂಮಂಜೂರಾತಿ ನಿಯಮಗಳು, 1999ರ ನಿಯಮ 2, 3 ಮತ್ತು 6 ಕ್ಕೆ ತಿದ್ದುಪಡಿ ಮಾಡಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕದ 09.09.2003 ರಂದು ಹೊರಡಿಸಲಾದ ಆರ್‌ಡಿ 63 ಎಲ್‌ಜಿಪಿ 2001ನೇ ಸಂಖ್ಯೆಯ ಅಧಿಸೂಚನೆ.

6. ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂಮಂಜೂರಾತಿ ನಿಯಮಗಳು, 1969ರ ನಿಯಮ 19 ಹಾಗೂ 20ಕ್ಕೆ ತಿದ್ದುಪಡಿ ಮಾಡಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 01.10.2003ರಂದು ಹೊರಡಿಸಲಾದ ಆರ್‌ಡಿ 12 ಎಲ್‌ಜಿಪಿ 2003ನೇ ಸಂಖ್ಯೆಯ ಅಧಿಸೂಚನೆ.

7. ಕರ್ನಾಟಕ ಭೂಮಂಜೂರಾತಿ ನಿಯಮ 1969ರ ನಿಯಮ 20ಕ್ಕೆ ತಿದ್ದುಪಡಿ ಮಾಡಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 16.01.2004ರಂದು ಹೊರಡಿಸಲಾದ ಆರ್‌ಡಿ 92 ಎಲ್‌ಜಿಪಿ 2000ನೇ ಸಂಖ್ಯೆಯ ಅಧಿಸೂಚನೆ.

8. ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂಮಂಜೂರಾತಿ ನಿಯಮಗಳು, 1999ಕ್ಕೆ ನಿಯಮವನ್ನು ರಚಿಸಿ, ಅನುಬಂಧವನ್ನು ಬದಲಿಸಿ 13.02.2004ರಿಂದ ಜಾರಿಗೆ ಬರುವಂತೆ ದಿನಾಂಕ 23.02.2004ರಂದು ಹೊರಡಿಸಲಾದ ಆರ್‌ಡಿ 63 ಎಲ್‌ಜಿಪಿ 2001ನೇ ಸಂಖ್ಯೆಯ ಅಧಿಸೂಚನೆ.

9. ಕರ್ನಾಟಕ ಭೂ ಕಂದಾಯ ನಿಯಮ 1966ರ ನಿಯಮ 119ಕ್ಕೆ ತಿದ್ದುಪಡಿ ಮಾಡಿ, ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ

ಬರುವಂತೆ ದಿನಾಂಕ 28.05.2004ರಂದು ಹೊರಡಿಸಲಾದ ಆರ್‌ಡಿ 70 ಎಲ್‌ಜಿಪಿ 2002ನೇ ಸಂಖ್ಯೆಯ ಅಧಿಸೂಚನೆ.

10. ಕರ್ನಾಟಕ ಭೂ ಕಂದಾಯ ನಿಯಮ 1966ರ ನಿಯಮ 108–1ಕ್ಕೆ ತಿದ್ದುಪಡಿ ಮಾಡಿ ನಗರ ಪ್ರದೇಶದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಜಮೀನನ್ನು ಯಾವುದೆ ವ್ಯಕ್ತಿ ಅಥವಾ ಖಾಸಗಿ ಸಂಸ್ಥೆಗಳಿಗೆ ಮಂಜೂರು ಮಾಡದೇ, ಬೆಳೆಯುತ್ತಿರುವ ನಗರದ ಅನುಕೂಲಕ್ಕಾಗಿ ಸಾರ್ವಜನಿಕ ಅಥವಾ ಸರ್ಕಾರಿ ಉಪಯೋಗಕ್ಕಾಗಿ ಮೀಸಲಿಡುವಂತೆ ಸೇರ್ಪಡೆಗೊಳಿಸಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 23.04.2005ರಂದು ಹೊರಡಿಸಲಾದ ಆರ್‌ಡಿ 37 ಎಲ್‌ಜಿಪಿ 2002(I)ನೇ ಸಂಖ್ಯೆಯ ಅಧಿಸೂಚನೆ.

10ಎ. ಕರ್ನಾಟಕ ಭೂ ಮಂಜೂರಾತಿ ನಿಯಮ 1969ರ ನಿಯಮ 7 ಮತ್ತು 21ನ್ನು ಪ್ರತಿಯೋಜಿಸಿ ಹಾಗೂ ನಿಯಮ 9, 10, 12, 17, 19ಗಳಿಗೆ ತಿದ್ದುಪಡಿ ಮಾಡಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 23.04.2005ರಂದು ಹೊರಡಿಸಲಾದ ಆರ್‌ಡಿ 37 ಎಲ್‌ಜಿಪಿ 2002(II)ನೇ ಸಂಖ್ಯೆಯ ಅಧಿಸೂಚನೆ.

11. ಕರ್ನಾಟಕ ಭೂ ಕಂದಾಯ ನಿಯಮ 1966ರ ನಿಯಮ 108–1ಕ್ಕೆ ತಿದ್ದುಪಡಿ ಮಾಡಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 16.06.2005ರಂದು ಹೊರಡಿಸಲಾದ ಆರ್‌ಡಿ 37 ಎಲ್‌ಜಿಪಿ 2002ನೇ ಸಂಖ್ಯೆಯ ಅಧಿಸೂಚನೆ.

12. 1999ರ ಕರ್ನಾಟಕ ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣದ ಸಂದರ್ಭದಲ್ಲಿ ಭೂ ಮಂಜೂರಾತಿ ನಿಯಮಾವಳಿ ನಿಯಮ 6ನ್ನು ತಿದ್ದುಪಡಿ ಮಾಡಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 26.08.2005ರಂದು ಹೊರಡಿಸಲಾದ ಆರ್‌ಡಿ 22 ಎಲ್‌ಜಿಪಿ 2004ನೇ ಸಂಖ್ಯೆಯ ಅಧಿಸೂಚನೆ.

13. ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂಮಂಜೂರಾತಿ ನಿಯಮಗಳು. 1999ರ

ನಿಯಮ 3ನ್ನು ತಿದ್ದುಪಡಿ ಮಾಡಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 16.12.2005 ರಂದು ಹೊರಡಿಸಲಾದ ಆರ್‌ಡಿ 59 ಎಲ್‌ಜಿಪಿ 2005ನೇ ಸಂಖ್ಯೆಯ ಅಧಿಸೂಚನೆ.

14. ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂಮಂಜೂರಾತಿ ನಿಯಮಗಳು, 1999ರ ನಿಯಮ 3(2)ನ್ನು ಪ್ರತಿಯೋಜಿಸಿ ತಿದ್ದುಪಡಿ ಮಾಡಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 20.03.2006ರಂದು ಹೊರಡಿಸಲಾದ ಆರ್‌ಡಿ 59 ಎಲ್‌ಜಿಪಿ 2005ನೇ ಸಂಖ್ಯೆಯ ಅಧಿಸೂಚನೆ.

15. 1966ರ ಕರ್ನಾಟಕ ಭೂ ಕಂದಾಯ ನಿಯಮಗಳ ನಿಯಮ 108ನ್ನು ತಿದ್ದುಪಡಿ ಮಾಡಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 29.06.2007ರಂದು ಹೊರಡಿಸಲಾದ ಆರ್‌ಡಿ 43 ಎಲ್‌ಜಿಪಿ 2006ನೇ ಸಂಖ್ಯೆಯ ಅಧಿಸೂಚನೆ.

16. 2007ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಾವಳಿ ನಿಯಮ 97(4) ಗೋಮಾಳ ಜಮೀನನ್ನು ವಿತರಿಸುವ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಅಧಿಕಾರ ನೀಡಿ ನಿಯಮಗಳನ್ನು ಸೇರ್ಪಡೆಗೊಳಿಸಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 25.01.2008ರಂದು ಹೊರಡಿಸಲಾದ ಆರ್‌ಡಿ 33 ಎಲ್‌ಜಿಪಿ 2007ನೇ ಸಂಖ್ಯೆಯ ಅಧಿಸೂಚನೆ.

17. ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂಮಂಜೂರಾತಿ ನಿಯಮಗಳು, 1999ರ ನಿಯಮ 3(2)ನ್ನು ಪ್ರತಿಯೋಜಿಸಿ ತಿದ್ದುಪಡಿ ಮಾಡಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 24.12.2008 ರಂದು ಹೊರಡಿಸಲಾದ ಆರ್‌ಡಿ 53 ಎಲ್‌ಜಿಪಿ 2008ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**III ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ) ಸಚಿವರ ಪರವಾಗಿ:–**

**ಭಾರತದ ಸಂವಿಧನದ 213(2)(1)ನೇ ಅನುಚ್ಛೇದನದ ಮೇರೆಗೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ಕ್ಕೆ ತಿದ್ದುಪಡಿ ಮಾಡಿ ಸಂವ್ಯಶಾಇ 11 ಶಾಸನ 2010, ದಿನಾಂಕ 20.05.2010ರಂದು ಹೊರಡಿಸಲಾದ ಆದ್ಯಾದೇಶ ಸಂಖ್ಯೆ 02ನ್ನು ಮಂಡಿಸುತ್ತಿದ್ದೇನೆ.

**IV ಶ್ರೀ ಎಂ ಪಿ ರೇಣುಕಾಚಾರ್ಯ (ಅಬಕಾರಿ) ಸಚಿವರು),**

**ಕರ್ನಾಟಕ ಅಬಕಾರಿ ಕಾಯ್ದೆ ಕಲಂ 71(4)ರನ್ವಯ:**

1. ಕರ್ನಾಟಕ ಅಬಕಾರಿ (ವೈನ್ ಉತ್ಪಾದನೆ) ನಿಯಮ 2008ರಡಿಯಲಿನ ನಿಯಮ 11ಕ್ಕೆ ತಿದ್ದುಪಡಿ ಮಾಡಿ ದಿನಾಂಕ 04.03.2010ರಂದು ಹೊರಡಿಸಲಾದ ಎಫ್‌ಡಿ 25 ಪಿಇಎಸ್ 2009ನೇ ಸಂಖ್ಯೆಯ ಅಧಿಸೂಚನೆ.

2. ಕರ್ನಾಟಕ ಅಬಕಾರಿ (ಲೀಸ್ ಆಫ್ ದಿ ರಿಟೈಲ್ ವೆಂಡ್ ಆಫ್ ಬಿಯರ್) ನಿಯಮ 1976ರಡಿಯಲ್ಲಿನ ನಿಯಮ 5ಕ್ಕೆ ತಿದ್ದುಪಡಿ ಮಾಡಿ ದಿನಾಂಕ 25.03.2010ರಂದು ಹೊರಡಿಸಲಾದ ಎಫ್‌ಡಿ 09 ಪಿಇಎಸ್ 2009ನೇ ಸಂಖ್ಯೆಯ ಅಧಿಸೂಚನೆ.

**ಅಧ್ಯಕ್ಷರು:** ಮಂಡಿಸಲಾಯಿತು.

**ಶ್ರೀ ಸಿದ್ದರಾಮಯ್ಯ:** ಇವರು ಸದನಕ್ಕೆ ಏಕೆ ಬರುತ್ತಾರೆ? ಇದು ಹುಡುಗಾಟವೇ? ಮಂತ್ರಿಗಳು ಜವಾಬ್ದಾರಿಯಿಂದ ಇರಬೇಕೇ, ಬೇಡವೇ? ಗೋಲಿ ಆಟ ಆಡುವುದಕ್ಕೆ ಬರುತ್ತಾರೆಯೇ?.

**ಶ್ರೀ ಟಿ ಬಿ ಜಯಚಂದ್ರ:** ಕೊನೆಯ ಪಕ್ಷ ಮಂತ್ರಿಗಳಾದವರು ಅವರ ಇಲಾಖೆಗೆ ಸಂಬಂಧಿಸಿದ ಕಾಗದಪತ್ರಗಳನ್ನು ಸಭೆಯ ಮುಂದೆ

ಮಂಡಿಸುವಾಗಲೂ ಕೂಡ ಹಾಜರಿರುವುದಿಲ್ಲವೆಂದರೆ ಇದು ನಾಚಿಕೆಗೇಡಿನ ವಿಚಾರ.

**ಅಧ್ಯಕ್ಷರು:** ಸರಿಮಾಡಿಕೊಳ್ಳುತ್ತಾರೆ.

**ಶ್ರೀ ಟಿ ಬಿ ಜಯಚಂದ್ರ:** ಯಾರು ಬೇಕಾದರೂ ಮಂಡನೆ ಮಾಡಬಹುದು, ಆ ವಿಚಾರ ಬೇರೆ.

**(ಗೊಂದಲ)**

**ಶ್ರೀ ಜಗದೀಶ್ ಶೆಟ್ಟರ್:** ವಿಧಾನಪರಿಷತ್ತಿನಲ್ಲಿ question hour ನಡೆಯುತ್ತಿದೆ. ಶ್ರೀ ಸುರೇಶ್ ಕುಮಾರ್‌ರವರ ಖಾತೆಗೆ ಸಂಬಂಧಿಸಿದ ಪ್ರಶ್ನೆಗಳು ಅಲ್ಲಿ ಇವೆ.

**ಶ್ರೀ ಟಿ ಬಿ ಜಯಚಂದ್ರ:** ಅಂಥ ಸಂದರ್ಭದಲ್ಲಿ ನೀವು ಮಂಡಿಸಿ. ಅದು ಬಿಟ್ಟು ಬೇರೆಯವರ ವಿಚಾರದಲ್ಲಿಯೂ ಕೂಡ ಮಾಡುವುದು ಸರಿಯಿಲ್ಲ. ಈಗ ಮಾನ್ಯ ಮಂತ್ರಿಯವರು ಕಾಗದಪತ್ರ ಮಂಡಿಸಿದರು. ಅವರು ಮಂಡಿಸಬೇಕಾದ ಕಾಗದ ಪತ್ರಗಳ ಬಗ್ಗೆ ಅವರಿಗೇ ಗೊತ್ತಿಲ್ಲವೆಂದರೆ ಹೇಗೆ?

**(ಗೊಂದಲ)**

**ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)**

**I. ಶ್ರೀ ಬಿ ಎಸ್ ಯಡಿಯೂರಪ್ಪ (ಮುಖ್ಯಮಂತ್ರಿ) ಅವರ ಪರವಾಗಿ:–**

***1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(7)ರ ಪ್ರಕರಣದ ಮೇರೆಗೆ:***

1. ಶ್ರೀ ಎ.ಬಿ.ಇಬ್ರಾಯಿಂ ಕೆ.ಎ.ಎಸ್. ಇವರ ವಿರುದ್ಧದ ಲೋಕಾಯುಕ್ತ ವಿಚಾರಣೆಯ ಬಗ್ಗೆ ವಿವರಣಾತ್ಮಕ ಮತ್ತು ಲೋಕಾಯುಕ್ತರ ವಿಶೇಷ ವರದಿ.

**ಭಾರತದ ಸಂವಿಧಾನದ ಅನುಚ್ಛೇದದ 323(2)ರ ಪ್ರಕರಣದ ಮೇರೆಗೆ:**

2. ಕರ್ನಾಟಕ ಲೋಕ ಸೇವಾ ಆಯೋಗದ 2008–09ನೇ ಸಾಲಿನ ವಾರ್ಷಿಕ ವರದಿ. ಹಾಗೂ

**2005ರ ಮಾಹಿತಿ ಹಕ್ಕು ಅಧಿನಿಯಮದ ಕಲಂ 25(4)ರ ಪ್ರಕರಣದ ಮೇರೆಗೆ:**

1. ಕರ್ನಾಟಕ ಮಾಹಿತಿ ಆಯೋಗದ 2007–08ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

**1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ ಕಲಂ 47(5) ಪ್ರಕರಣದ ಮೇರೆಗೆ:**

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2008–09ನೇ ಸಾಲಿನ ಪ್ರಮಾಣೀಕೃತ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ.

**1956ರ ಕಂಪನಿಗಳ ಅಧಿನಿಯಮದ 619 ಕಲಂ (ಎ)ರ ಪ್ರಕರಣದ ಮೇರೆಗೆ:**

1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇದರ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ವಿದ್ಯುತ್‌ಚ್ಛಕ್ತಿ ನಿಯಂತ್ರಣ ಆಯೋಗದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

3. ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ. ಹಾಗೂ

4. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)**

**II. ಶ್ರೀ ಎ ಎಸ್ ಅಚಾರ್ಯ(ಗೃಹ ಮತ್ತು ಮುಜರಾಯಿ ಸಚಿವರು) ಅವರ ಪರವಾಗಿ:–**

**1956ರ ಕಂಪನಿಗಳ ಅಧಿನಿಯಮದ ಕಲಂ 619 (ಎ)ರ ಪ್ರಕರಣದ ಮೇರೆಗೆ:**

1. ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ..

**1952ರ ವಿಚಾರಣಾ ಆಯೋಗದ ಅಧಿನಿಯಮದ ಕಲಂ 3(4) ರ ಪ್ರಕರಣದ ಮೇರೆಗೆ:**

1. ಏಪ್ರಿಲ್ 1993ರಿಂದ 31ನೇ ಡಿಸೆಂಬರ್ ಅವಧಿಯಲ್ಲಿ ಭಟ್ಕಳ ಪಟ್ಟಣದಲ್ಲಿ ಮತ್ತು ಅದರ ಸುತ್ತಮುತ್ತಲೂ ನಡೆದ ಹಿಂಸಾಚಾರ, ಧ್ವಂಸ ಮತ್ತು ಸಾವಿಗೆ ಎಡೆಗೊಟ್ಟರುವ ಘಟನೆಗಳು ಹಾಗೂ ಸನ್ನಿವೇಶಗಳ ಕುರಿತು ಪರಿಶೀಲಿಸಿ ವರದಿಯನ್ನು ನೀಡಲು ರಚಿಸಲಾದ ನ್ಯಾಯಮೂರ್ತಿ ಕೆದಂಬಾಡಿ ಜಗನ್ನಾಥ ಶೆಟ್ಟಿ ವಿಚಾರಣಾ ಆಯೋಗದ ವರದಿಯನ್ನು ಮಂಡಿಸುತ್ತಿದ್ದೇನೆ.

**III ಶ್ರೀ ಸಿ ಎಂ ಉದಾಸಿ (ಲೋಕೋಪಯೋಗಿ ಸಚಿವರು) ಅವರು:**

**1996ರ ಕಂಪನಿಗಳ ಅಧಿನಿಯಮದ 609 (4) ಪ್ರಕರಣದ ಮೇರೆಗೆ:**

1. ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**IV ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) ಅವರು:**

**1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ ಕಲಂ 262 (3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ:**

1. ಕೋಲಾರ ಜಿಲ್ಲಾ ಪಂಚಾಯತ್‌ನ 2008–09ನೇ ಸಾಲಿನ ವಾರ್ಷಿಕ ಆಡಳಿತ ವರದಿ.

2. ಮೈಸೂರು ಜಿಲ್ಲಾ ಪಂಚಾಯತ್‌ನ 2008–09ನೇ ಸಾಲಿನ ವಾರ್ಷಿಕ ಆಡಳಿತ ವರದಿ.

3. ಮಂಡ್ಯ ಜಿಲ್ಲಾ ಪಂಚಾಯತ್‌ನ 2008–09ನೇ ಸಾಲಿನ ವಾರ್ಷಿಕ ಆಡಳಿತ ವರದಿ.

4. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ 2008–09ನೆ ಸಾಲಿನ ವಾರ್ಷಿಕ ಆಡಳಿತ ವರದಿ.

5. ಕೊಡಗು ಜಿಲ್ಲಾ ಪಂಚಾಯತ್‌ನ 2007–08ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

6. ಬೆಳಗಾವಿ ಜಿಲ್ಲಾ ಪಂಚಾಯತ್‌ನ 2008–09ನೇ ಸಾಲಿನ ವಾರ್ಷಿಕ ಆಡಳಿತ ವರದಿ.

7. ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನ 2007–08ನೇ ಮತ್ತು 2008–09ನೇ ಸಾಲಿನ ವಾರ್ಷಿಕ ಆಡಳಿತ ವರದಿ.

8. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2007–08ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

9. ರಾಯಚೂರು ಜಿಲ್ಲಾ ಪಂಚಾಯತ್‌ನ 2007–08ನೇ ಸಾಲಿನ ವಾರ್ಷಿಕ ಆಡಳಿತ ವರದಿ.

10. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2007–08ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ

11. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2008–09ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತಿದ್ದೇನೆ.

**1956ರ ಕಂಪನಿ ಅಧಿನಿಯಮದ ಕಲಂ619 (ಎ) ಪ್ರಕರಣದ ಮೇರೆಗೆ:**

1. ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇವೆ.

**ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)**

**V ಶ್ರೀ ಎಸ್ ಸುರೇಶ್ ಕುಮಾರ್(ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರು) ಅವರ ಪರವಾಗಿ:–**

**1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 49ರ ಮೇರೆಗೆ:**

1. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಗದಗ–ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿ. 2009–10ನೇ ಸಾಲಿನ ವಾರ್ಷಿಕ ವರದಿ.

3. ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

4. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2009–10ನೇ ಸಾಲಿನ ವಾರ್ಷಿಕ ವರದಿ.

5. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

6. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

7. ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ ಹಾಗೂ.

8. ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)**

**VI ಶ್ರೀ ಆರ್ ಅಶೋಕ್ (ಸಾರಿಗೆ ಸಚಿವರು) ಅವರ ಪರವಾಗಿ:–**

**1950ರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಅಧಿನಿಯಮದ ಕಲಂ 33(4)ರ ಪ್ರಕರಣದ ಮೇರೆಗೆ:**

1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 2008–08ನೆ ಸಾಲಿನ ವಾರ್ಷಿಕ ಆಡಳಿತ ವರದಿ ಹಾಗೂ

2. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 2008–09ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**VII ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) ಅವರ ಪರವಾಗಿ:–**

**1964ರ ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿನಿಯಮದ 25ನೇ ಪರಿಚ್ಛೇದದ ಮೇರೆಗೆ:**

1. ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2007–08ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ. ಹಾಗೂ

2. ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2009–10ನೇ ಸಾಲಿನ ಪರಿಷ್ಕೃತ ಆಯವ್ಯಯ ಪಟ್ಟಿ ಮತ್ತು 2010–2011ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಮಂಡಿಸುತ್ತಿದ್ದೇನೆ.

**1956ರ ಕಂಪನಿಗಳ ಅಧಿನಿಯಮದ ಕಲಂ 619(ಎ) ಪ್ರಕರಣದ ಮೇರೆಗೆ:**

1. ಕರ್ನಾಟಕ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿಯಮಿತ (ಕೆಯೋನಿಕ್ಸ್) ಇದರ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)**

**VIII ಶ್ರೀ ಎಸ್ ಎ ರವೀಂದ್ರನಾಥ್ (ಕೃಷಿ ಸಚಿವರು) ಅವರ ಪರವಾಗಿ:–**

**1963ರ ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯ ಅಧಿನಿಯಮ ಕಲಂ 38(3)ರ ಪ್ರಕರಣದ ಮೆರೆಗೆ:**

1. ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇದರ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ. ಹಾಗೂ.

2. ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇದರ 2008–09ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**1956ರ ಕಂಪನಿಗಳ ಅಧಿನಿಯಮದ ಕಲಂ 619 (ಎ) ಪ್ರಕರಣದ ಮೇರೆಗೆ:**

1. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ರಾಜ್ಯ ಆಗ್ರೋ ಕಾರನ್ ಪ್ರಾಡಕ್ಟ್ಸ್ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ. ಹಾಗೂ.

3. ಕರ್ನಾಟಕ ಬೀಜ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು**

**IX ಶ್ರೀ ಬಸವರಾಜ್ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು) ಅವರ ಪರವಾಗಿ:–**

**1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 25ರ ಪ್ರಕರಣದ ಮೇರೆಗೆ.**

1. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೇಳಗಾವಿ ಇದರ 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿ. ಹಾಗೂ

2. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ನೀರಾವರಿ ಯೋಜನೆಗಳ ವಲಯ, ಗುಲ್ಬರ್ಗಾ ಇದರ 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**X. ಶ್ರೀ ಅರವಿಂದ ಎಸ್ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) ಅವರ ಪರವಾಗಿ:–**

**1992ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಧಿನಿಯಮದ ಕಲಂ 27(4)ನೇ ಪ್ರಕರಣದ ಮೇರೆಗೆ:**

1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 2005–06 ಮತ್ತು 2006–07ನೆ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2008–09ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**2000ದ ಕರ್ನಾಟಕ ವಿಶ್ವವಿದ್ಯಾಲಯ ಅಧಿನಿಯಮದ ಕಲಂ 47(4),50(2)ನೇ ಪ್ರಕರಣದ ಮೇರೆಗೆ:**

1. ಮಂಗಳೂರು ವಿಶ್ವವಿದ್ಯಾಲಯದ 2007–08ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಬೆಂಗಳೂರು ವಿಶ್ವವಿದ್ಯಾಲಯದ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2007–08ನೇ ಸಾಲಿನ ವಾರ್ಷಿಕ ವರದಿ. ಹಾಗೂ

3. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ 2007–08ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2008–09ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**XI ಶ್ರೀ ಡಿ ಸುಧಾಕರ್ (ಸಮಾಜ ಕಲ್ಯಾಣ ಸಚಿವರು) ಅವರು:**

**1956ರ ಕಂಪನಿಗಳ ಅಧಿನಿಯಮದ ಕಲಂ 619 (ಎ) ಪ್ರಕರಣದ ಮೇರೆಗೆ:**

1. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ 2007–08ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧಾನಾ ವರದಿ. ಹಾಗೂ

2. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**(ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)**

**XII. ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಸಚಿವರು) ಅವರ ಪರವಾಗಿ:–**

**1962ರ ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಅಧಿನಿಯಮದ ಕಲಂ 31(ii)ನೇ ಪ್ರಕರಣದ ಮೇರೆಗೆ:**

1. ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**XIII. ಶ್ರೀ ರೇವೂನಾಯಕ್ ಬೆಳಮಗಿ (ಪಶು ಸಂಗೋಪನೆ ಸಚಿವರು) ಅವರ ಪರವಾಗಿ:–**

**1956ರ ಕಂಪನಿಗಳ ಅಧಿನಿಯಮದ ಕಲಂ 619 (ಎ) ಪ್ರಕರಣದ ಮೇರೆಗೆ:**

1. ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ 2007–08ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ.

**2004ರ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮದ ಕಲಂ 43ರ ಪ್ರಕರಣದ ಮೇರೆಗೆ:**

1. ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇದರ 2004–05 ಮತ್ತು 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು**

**XIV. ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಸಚಿವರು) ಅವರ ಪರವಾಗಿ:–**

**1956ರ ಕಂಪನಿಗಳ ಅಧಿನಿಯಮದ ಕಲಂ 619 (ಎ) ಪ್ರಕರಣದ ಮೇರೆಗೆ:**

1. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು

**XV. ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಅವರ ಪರವಾಗಿ:–**

**1956ರ ಕಂಪನಿಗಳ ಅಧಿನಿಯಮದ ಕಲಂ 619 (ಎ) (2)ರ ಪ್ರಕರಣದ ಮೇರೆಗೆ:**

1. ಎನ್.ಜಿ.ಇ.ಎಫ್.(ಹುಬ್ಬಳ್ಳಿ) ನಿಯಮಿತ ಇದರ 2008–09ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

2. ಮೈಸೂರು ಮಿನರಲ್ಸ್ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನ ವರದಿ ಹಾಗೂ

3. ಮೈಸೂರು ಸಕ್ಕರೆ ಕಾರ್ಖಾನೆಯ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**ಅಧ್ಯಕ್ಷರು:** ಮಂಡಿಸಲಾಯಿತು.

4. **ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:**

**ವಿಷಯ:** ನೈಸ್ ಯೋಜನೆಗೆ ಸಂಬಂಧಿಸಿದಂತೆ ರೈತರು ಮಾನ್ಯ ಮುಖ್ಯಮಂತ್ರಿಯವರ ಗೃಹ ಕಛೇರಿ ಕೃಷ್ಣಾ ಎದರು ನಡೆಸುತ್ತಿದ್ದ ಪ್ರತಿಭಟನೆ ಮೇಲೆ ಪೋಲಿಸರು ನಡೆಸಿದ ಲಾಠಿ ಪ್ರಹಾರದ ಬಗ್ಗೆ.

**ಶ್ರೀ ಎ ಎಸ್ ಪಾಟೀಲ್ (ನಡಹಳ್ಳಿ) (ದೇವರಹಿಪ್ಪರಗಿ):** ಮಾನ್ಯ ಅಧ್ಯಕ್ಷರೆ, ದಿನಾಂಕ 27.06.2010ರಂದು ಮಾನ್ಯ ಮುಖ್ಯಮಂತ್ರಿಯವರ ಗೃಹ ಕಛೇರಿ ಕೃಷ್ಣಾ ಎದುರು ಮತ್ತು ಹೆಮ್ಮಿಗೆಪುರ ಬಳಿ ನೈಸ್ ರಸ್ತೆಯಲ್ಲಿ ನೈಸ್ ಯೋಜನೆಗೆ ಸಂಬಂಧಿಸಿದಂತೆ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ರೈತರ ಮೇಲೆ ಲಾಠಿ ಪ್ರಹಾರ ನಡೆಸಿ ಪೊಲೀಸರು ಮನಬಂದಂತೆ ಹೊಡೆದಿದ್ದಾರೆ, ಅವರ ಲಾಠಿ ಏಟಿಗೆ ಬೆದರಿದ ರೈತರು ಸ್ಥಳದಿಂದ ಓಡಿ ಹೋದರೂ ಕೂಡ ಬಿಡದೆ ಪೊಲೀಸ್‌ನವರು ಅವರ ಬೆನ್ನುಹತ್ತಿ ಹಿಡಿದು ಕಬ್ಬಿಣದ ಸಲಾಕೆಗಳಿಂದ ಥಳಿಸಿದ್ದಾರೆ ಮತ್ತು ಅವರಿಂದ ತಪ್ಪಿಸಿಕೊಳ್ಳುವುದಕ್ಕೆ ಆಶ್ರಯ ಅರಸಿ ಬೇರೆ ಬೇರೆ ಮನೆಗಳಿಂದ ರೈತರು ನುಗ್ಗಿ ಹೋದರೂ ಕೂಡ ಅವರನ್ನು ಬಿಡದೆ ಪೊಲೀಸ್‌ನವರು ಮನಬಂದಂತೆ ಥಳಿಸಿದ್ದಾರೆ ಮತ್ತು ರೈತರ ಮೇಲೆ ಹಲ್ಲೆ ಮಾಡಿ ಇಲ್ಲಸಲ್ಲದ ಕೇಸುಗಳನ್ನು ಹಾಕಿ ಭಯದ ವಾತಾವರಣ ಸೃಷ್ಟಿ ಮಾಡಿದ್ದರ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯಬಯಸುತ್ತೇನೆ. ಇದು ಎಲ್ಲಾ ಟಿ.ವಿ. ಮಾಧ್ಯಮಗಳಲ್ಲೂ ಗಂಭೀರವಾಗಿ ಪ್ರಚಾರವಾಗಿದೆ, ಪತ್ತಿಕೆಗಳಲ್ಲೂ ಬಂದಿದೆ. ಅದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) (ಗೃಹ ಮತ್ತು ಮುಜರಾಯಿ ಸಚಿವರ ಪರವಾಗಿ):** ಮಾನ್ಯ ಅಧ್ಯಕ್ಷರೆ,

ತಲಘಟ್ಟಪುರ ಪೊಲೀಸ್ ಠಾಣಾ ವ್ಯಾಪ್ತಿಯ ಬಿ.ಎಂ.ಐ.ಸಿ. ನೈಸ್ ಕಾರಿಡಾರ್ ವಿವಾದದ ಹಿನ್ನಲೆಯಲ್ಲಿ ಹೆಮ್ಮಿಗೆಪುರ ಹಾಗೂ ಅಕ್ಕಪಕ್ಕದ